ಮಕ್ಕಳನ್ನು ಹಾರಿಸಿಕೊಂಡು ಹೋಗುತ್ತವೆ. ನಾನು ಹೇಳುವ ಆ ಸಮಯಕ್ಕೆ ನೀವು ಇಲ್ಲಿರಬೇಕು ಎಂದು ಸೂಚಿಸಿದ. ಕಾದಿದ್ದು ನಿಗದಿತ ದಿನಕ್ಕೆ ಎಲ್ಲಾ ಕೆಲಸಗಳ ಬಿಸಾಕಿ ಮತ್ತೆ ಪಕ್ಷಿಗಳಿದ್ದಲ್ಲಿ ಓಡಿ ಹೋದೆವು. ಅಲ್ಲಿ ಹೋಗಿ ನೋಡಿದರೆ ನಮಗೊಂದು ಆಘಾತ ಕಾದಿತ್ತು.

ಗೂಡಿನಲ್ಲಿ ಮರಿಗಳು ಇರಲಿಲ್ಲ. ತಾಯಿ ತಂದೆ ಹಕ್ಕಿಯ ಸುಳಿವೂ ಇರಲಿಲ್ಲ. ಇದನ್ನು ನೋಡಿ ಅವಾಕ್ಕಾದ ಚಂದ್ರು ದಿಗ್ಭ್ರಮೆಗೊಂಡ. 'ನಿನ್ನೆ ನೋಡಿದಾಗ ಇದ್ದವು ಸರ್. ಇನ್ನೂ ಹಾರಿ ಹೋಗುವ ಸ್ಥಿತಿಯಲ್ಲೂ ಇರಲಿಲ್ಲ. ಏನಾಯಿತು ನೋಡೋಣ ಬನ್ನಿ' ಎಂದು ಗೂಡಿನ ಸಮೀಪ ಹೋದೆವು. ಮರಿಗಳು ಇರುವಾಗ ಯಾವ ಕಾರಣಕ್ಕೂ ಗೂಡಿನ ಹತ್ತಿರಕ್ಕೂ ನಾವು ಹೋಗುವುದಿಲ್ಲ. ನಮ್ಮ ವ್ಯವಹಾರ ಏನಿದ್ದರೂ ಹತ್ತು ಹದಿನೈದು ಅಡಿ ದೂರದಿಂದ ಅಷ್ಟೆ. ಅವನ ಜೊತೆ ಸೇರಿ ಗೂಡಿನ ಕೆಳಗೆ ತಲಾಶ್ ಮಾಡಿದಾಗ ಆ ಎಳೆಯ ಮರಿಗಳ ಪುಕ್ಕಗಳು ಚೆಲ್ಲಾಡಿದ್ದವು. 'ಇದೆಲ್ಲಾ ಆ ಹಲ್ಕ ಕೆಂಪು ಕಾಗೆ ಕೆಲಸ ಸರ್. ದರಿದ್ರ ನನ್ಮಗಂದು. ಯಾವ ಮರಿಗಳನ್ನೂ ಬೆಳಿಯಾಕ್ ಬಿಡಲ್ಲ. ಎಲ್ಲಾ ಹಿಡಿದು ತಿಂದಾಕುತ್ತೆ' ಎಂದು ಕೌಕಲ್‌ಗೆ ಸಿಟ್ಟಿನಲ್ಲಿ ಬೈದ. ಮರಿಗಳನ್ನು ಕೌಕಲ್ ಹೊತ್ತೊಯ್ದ ಬಗ್ಗೆ ನನಗೂ ಬೇಸರವೆನಿಸಿತು.

ಆಗ ನಾನು, 'ಅದಕ್ಕೆ ಯಾಕ್ ಬೈತಿಯ ಬಿಡು. ಪ್ರಕೃತಿ ಅದಕ್ಕೆ ಕೊಟ್ಟಿರೋ ಕೆಲಸವೇ ಇದು. ಈಗ ಕೆಂಪುಕಾಗೆ ಮರಿಗಳು ಇದೇ ಸಮಯದಲ್ಲಿ ಹುಟ್ಟಿ ಬೆಳೀತಾ ಇರ್ತವೆ. ಅವಕ್ಕೆ ಬೇಕಾದ ಪ್ರೋಟೀನ್ಸ್ ದಕ್ಕಬೇಕು ಅಂದ್ರೆ ಅದು ಹೀಗೆ ಬೇರೆ ಗೂಡುಗಳಲ್ಲಿರುವ ಮರಿಗಳನ್ನ ಕದ್ದು ತಿನ್ನಿಸಲೇಬೇಕು. ಅದು ಕೌಕಲ್‌ನ ದುರಾಸೆಯಲ್ಲ, ಅಗತ್ಯ. ಇದೇ ನಿಸರ್ಗ ನಿಯಮ. ಇದಕ್ಕೆಲ್ಲಾ ನಾವು ಬೇಜಾರಾಗುವುದು ಬೇಡ. ಇರಲಿ ಕಾಡಲ್ಲಿ ಇನ್ನೇನ್ನಾದರೂ ಸಿಗುತ್ತಾ ನೋಡೋಣ ಬಾ' ಎಂದು ಹೊರಟೆವು. ಚಂದ್ರು ಮಾತ್ರ ತುಂಬಾ ಖಿನ್ನನಾಗಿದ್ದ. ಸಮಯವಾಯಿತೆಂದು ನಾವು ತಿಂಡಿ ತಿಂದರೂ, ಅವನು ಮಾತ್ರ ಹಸಿವಿಲ್ಲ ಎಂದು ಉಪಾಸವೇ ಇದ್ದು ಬಿಟ್ಟ. ಪ್ಯಾರಾಡೈಸ್ ಪಕ್ಷಿ ಗೂಡು ಕಟ್ಟಿ, ಮೊಟ್ಟೆ ಇಟ್ಟು, ಮರಿ ಮಾಡಿ, ಅದನ್ನು ಸಾಕುವ ಅಷ್ಟೂ ದಿನಚರಿಯನ್ನು ದಿನವೂ ನೋಡಿ ಆತ ಪುಳಕಿತಗೊಂಡಿದ್ದ. ತಾಯಿ ಹಕ್ಕಿ ಗೂಡಿನಿಂದ ತನ್ನ ಮರಿಗಳ ಹಾರಿಸಿಕೊಂಡು ಹೋಗುವ ದೃಶ್ಯವನ್ನು ಭಾವನಾತ್ಮಕವಾಗಿ ನೋಡ ಬಯಸಿದ್ದ. ಹೀಗೆ ಗೂಡು ದಿಢೀರ್ ನಾಶವಾಗಿದ್ದು ಅವನಲ್ಲಿ ನೋವು ತಂದಿತ್ತು. 'ನಿಸರ್ಗದಲ್ಲಿ ಈ ಸಾವು ನೋವುಗಳನ್ನು ಸಹಜವಾಗಿ ನೋಡುವ ಅಭ್ಯಾಸ ಮಾಡಿಕೊಳ್ಳಬೇಕು ಚಂದ್ರು. ಯಾವ ಕಾರಣಕ್ಕೂ ಇಷ್ಟೊಂದು ಭಾವುಕವಾಗಬಾರದು. ನಿರ್ಲಿಪ್ತವಾಗಿ, ಮೌನವಾಗಿ ಮಾತೇ ಇಲ್ಲದೇ ಹುಟ್ಟು ಸಾವುಗಳನ್ನು ನೋಡುವ ಶಕ್ತಿ ಈ ಪರಿಸರಕ್ಕಿದೆ. ಹಕ್ಕಿಗಳು ಸೋತರೂ ಧೃತಿಗೆಡುವುದಿಲ್ಲ. ಮತ್ತೆ ಈ ಋತುಮಾನ ಮುಗಿಯುವುದರೊಳಗೆ ಮತ್ತೆ ಗೂಡು ಕಟ್ಟಿ ಮರಿ ಮಾಡುತ್ತವೆ ಗಮನಿಸುತ್ತಿರು' ಎಂದು ಅವನಿಗೆ ಧೈರ್ಯ ತುಂಬಿದೆ. ನನಗೂ ಬಂದ ಕೆಲಸ ಆಗಲಿಲ್ಲವಲ್ಲ ಎಂಬ ನಿರಾಸೆಯಿತ್ತು. 'ಸರ್ ಸುಮ್ನೆ ಟೈಮ್ ವೇಸ್ಟ್ ಮಾಡೋದು ಯಾಕೆ? ಮುಂದೆ ಒಂದು ಕಡೆ ನಿನ್ನೆ ಸಂಜೆ ನೈಟ್ ಜಾರ್ ಹಕ್ಕಿ ತನ್ನ ಮರಿಗಳನ್ನು ಕರ್ಕೊಂಡು ಬಂದು ಕೂರಿಸಿದ್ದು ನೋಡಿದ್ದೆ.

